





# ಮರೆಯಾಗುತ್ತಿರುವ ಮರಬಳ್ಳಿ ಗಣಪೆ

ಚಿತ್ರ ಬರಹ:
ಸದಾನಂದ ಕೆ.ಎಲ್. ತೀರ್ಥಹಳ್ಳಿ

ಮಲೆನಾಡಿನ ಕಾಡುಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತಿದ್ದ, ಮರದಂತೆಯೇ ಕಾಂಡವನ್ನು ಹೊಂದಿ ಬೃಹತ್ತಾಗಿ ಹಬ್ಬಿ ಬೆಳೆಯುತ್ತಿದ್ದ, ಗಣಪೆಬಳ್ಳಿ ಎಂಬ ಸಸ್ಯ ಕಣ್ಮರೆಯಾಗುತ್ತಿದೆ. ಪಶ್ಚಿಮ ಘಟ್ಟ ಪ್ರದೇಶ, ಹಿಮಾಲಯದ ಪೂರ್ವ ಭಾಗ, ಬಿಹಾರ ಮತ್ತು ಒರಿಸ್ಸಾದ ಅರಣ್ಯಗಳಲ್ಲಿ ನೈಸರ್ಗಿಕವಾಗಿ ಬೆಳೆಯುವ, ಈ ಬಳ್ಳಿಯ ವೈಜ್ಞಾನಿಕ ಹೆಸರು ಎಂಟೆಡಾ ಸ್ಯಾಂಡೆನ್ಸ್; ಕುಟುಂಬ ಮೈಮೋಸೆಸಿ.

ಸಂಸ್ಕೃತದಲ್ಲಿ ಗಿಲ್ಲ ಎಂದೂ, ಆಂಗ್ಲ ಭಾಷೆಯಲ್ಲಿ ಎಲಿಫೆಂಟ್ ಕ್ರೀಪರ್, ಗಾರ್ಬಿಬೀನ್, ಮತ್ತು ಸ್ವೋರ್ಡ್ ಬೀನ್ ಎಂದೂ ಪರ್ಯಾಯ ಹೆಸರುಗಳಿವೆ.

ದೊಡ್ಡ ಪ್ರಮಾಣದ ಮರಬಳ್ಳಿಯಾದ ಇದು ನೂರಾರು ಮೀಟರ್ ಉದ್ದದವರೆಗೂ ಇತರ ಮರಗಳ ಮೇಲೆ ಹಬ್ಬಿ ಬೆಳೆಯುತ್ತದೆ. ದ್ವಿಪಕ್ಷದ ಸಂಯುಕ್ತ ಎಲೆಗಳನ್ನು ಹೊಂದಿದ್ದು ಜನವರಿ ಮತ್ತು ಫೆಬ್ರುವರಿಯಲ್ಲಿ ಕದಿರುಮಂಜರಿಯಲ್ಲಿ ಹಳದಿ ಛಾಯೆಯ ಬಿಳಿಯ ಹೂಗಳನ್ನು ಗೊಂಚಲು ಗೊಂಚಲಾಗಿ-ಬಿಡುತ್ತವೆ. ಸುಮಾರು 3 ಅಡಿ ಉದ್ದ, 4 ಇಂಚು ಅಗಲದ ಹಸಿರು ಬಣ್ಣದ ಕಾಯಿಗಳಲ್ಲಿ ಎಂಟರಿಂದ 10 ಚಪ್ಪಟೆಯ ಕಂದುಬಣ್ಣದ ದ್ವಿದಳವನ್ನು ಹೊಂದಿದ ಬೀಜಗಳಿರುತ್ತವೆ. ಮೇ- ಜೂನ್ ತಿಂಗಳಲ್ಲಿ ಬೆಳೆದು ಬಲಿಯುವ ಕಾಯಿಯಲ್ಲಿರುವ ಬೀಜಗಳು ಉದುರಿ ಸುರಿಯುವ ಮಳೆ ನೀರಿಗೆ ತೇಲಿ ಹೋಗಿ ಬೀಜ ಪ್ರಸಾರ ಹೊಂದಿ ಸಸ್ಯಾಭಿವೃದ್ಧಿ ಆಗುತ್ತದೆ.

ಉಪಯೋಗ: ಗಣಪೆ ಬೀಜವು ಅನೇಕ ಉಪಯೋಗಗಳನ್ನು ಹೊಂದಿದೆ. ಈ ಬೀಜಗಳನ್ನು ಅಲಂಕಾರಿಕ ಹಾರಗಳನ್ನು ತಯಾರಿಸಲು ಬಳಸುತ್ತಾರೆ. ಔಷಧಿಯಾಗಿ ಮಲೆನಾಡಿನ ಹಳ್ಳಿ-ಗಳಲ್ಲಿ ದನಕರುಗಳಲ್ಲಿ ಕಂಡುಬರುವ ಗಂಟಲು ಊತ ರೋಗದ (ಗಂಟಲು ಭಾವು) ಉಪಶಮನಕ್ಕೆ ಬಳಸಲಾಗುತ್ತದೆ. ಮಿತ-ವಾಗಿ ಉಪ್ಪಿನಕಾಯಿ ತಯಾರಿಕೆಯಲ್ಲೂ ಬಳಸುತ್ತಾರೆ. ಚಿಕ್ಕ ಮಕ್ಕಳ ಕೆಮ್ಮಿನ ರೋಗದ ಉಪಶಮನಕ್ಕೂ ಉಪಯುಕ್ತ. ಅಲ್ಲದೆ ಬಾಣಂತಿಯರು ಗಣಪೆ, ಗಜ್ಜುಗೆ, ಕಾಳುಜೀರಿಗೆಯ ಮಿಶ್ರಣವನ್ನು ನಂಜು ನಿರೋಧಕ ಬಾಹ್ಯ ಲೇಪನವಾಗಿ ಉಪಯೋಗಿಸುತ್ತಾರೆ.

ಮುಖ್ಯವಾಗಿ ಅವಸಾನದ ಅಂಚಿನಲ್ಲಿರುವ ಅವಲು ಬಳ್ಳಿ, ಕೂಳೇ ಬಳ್ಳಿ ಹಾಗೂ ಚಿಗುರೊಳ್ಳಿ ಬಳ್ಳಿ ಮುಂತಾದವನ್ನು ಸಂರಕ್ಷಿಸುವುದು ಇಂದಿನ ಅಗತ್ಯವಾಗಿದೆ.